ಓ.ಎಸ್. ನಂಃ **291/2013**
ಡಿ.ಡಬ್ಲ್ಯೂಃ **2**

ದಿನಾಂಕ **26-02-2026** ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ನಂ.**1**(ಡಿ) ಪರ: ಶ್ರೀ. ಜಿ.ಎಂ.ಎಂ ವಕೀಲರಿಂದಃ

1 ನೇ ಪ್ರತಿವಾದಿ ಮರಿಲಿಂಗಪ್ಪ ನನ್ನ ತಂದೆ ಆಗಿದ್ದರು ಎಂದರೆ ಸರಿ. ಪ್ರತಿವಾದಿ ನಂ.1(ಎ) ನನ್ನ ತಾಯಿಯಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ ನಂ.1(ಬಿ) ರಿಂದ ಪ್ರತಿವಾದಿ ನಂ.1(ಎಫ್) ರವರುಗಳಾದ ನಾವು ಪ್ರತಿವಾದಿ ನಂ.1 ಹಾಗೂ 1(ಎ) ರವರ ಮಕ್ಕಳಾಗಿರುತ್ತೇವೆ ಎಂದರೆ ಸರಿ. ಈ ದಾವೆ ನಡೆಯುತ್ತಿರುವಾಗ ಪ್ರತಿವಾದಿ ನಂ.1(ಸಿ) ಭೀಮರಾಯ ಮರಣಹೊಂದಿದ್ದಾರೆ ಎಂದರೆ ಸರಿ. ನನ್ನ ತಾತ ವಂಕಸಂಬ್ರದ ಯಲ್ಲಪ್ಪ ತಂದೆ ಜಂಬಣ್ಣ ರವರ ಹೆಂಡತಿ ಹೆಸರು ಸಾಬವ್ವ ಆಗಿದ್ದು ಸದರಿ ದಂಪತಿಗಳಿಗೆ ನನ್ನ ತಂದೆ ಒಬ್ಬ ಮಾತ್ರ ಮಗ ಆಗಿದ್ದರು ಎಂದರೆ ಸರಿ. ದಾವಾ ಆಸ್ತಿ ನನ್ನ ತಂದೆಯ ಹಿರಿಯರ ಆಸ್ತಿ ಆಗಿರುತ್ತದೆ ಎಂದರೆ ಸರಿ.

2. ಈ ದಾವೆಯ ವಾದಿ ಮಲ್ಲರೆಡ್ಡಿ ಅಸಲು ದಾವಾ ನಂ.210/2014 ರಲ್ಲಿ 10 ನೇ ಪ್ರತಿವಾದಿ ಆಗಿದ್ದರು ಎಂದರೆ ಸರಿ. ಈ ದಾವೆಯ 2 ನೇ ಪ್ರತಿವಾದಿ ಭೀಮವ್ವ ರವರು ಅಸಲು ದಾವಾ ನಂ.210/2014 ರಲ್ಲಿ 9 ನೇ ಪ್ರತಿವಾದಿ ಆಗಿದ್ದರು ಎಂದರೆ ಸರಿ. ಭೀಮವ್ವ, ಸಿದ್ದಮ್ಮ ಹಾಗೂ ಮರಿಲಿಂಗಮ್ಮ ರವರು ಕಡೆಚೂರು ಗ್ರಾಮದ ಯಲ್ಲಪ್ಪ ತಂದೆ ನರಸಪ್ಪ ರವರ ಮಕ್ಕಳಾಗಿರುತ್ತಾರೆ ಎಂದರೆ ಸರಿ. ಸದರಿ ಸಿದ್ದಮ್ಮ ಮರಣಹೊಂದಿರುತ್ತಾರೆ ಎಂದರೆ ಸರಿ. ನರಸಪ್ಪ, ತಾಯಪ್ಪ, ದೊಡ್ಡ ನರಸಮ್ಮ ಹಾಗೂ ಸಣ್ಣ ನರಸಮ್ಮ ರವರು ಸದರಿ ಸಿದ್ದಮ್ಮನ ಮಕ್ಕಳಾಗಿರುತ್ತಾರೆ ಎಂದರೆ ಸರಿ. ಸದರಿ ದೊಡ್ಡ ನರಸಮ್ಮ ಮರಣಹೊಂದಿದ್ದು ಅವರಿಗೆ ಮಾಳಮ್ಮ ಎಂಬ ಮಗಳಿರುತ್ತಾಳೆ ಎಂದರೆ ಸರಿ. ಸದರಿ ನರಸಪ್ಪ, ತಾಯಪ್ಪ, ಮಾಳಮ್ಮ ಹಾಗೂ ಸಣ್ಣ ನರಸಮ್ಮ ರವರು ಅಸಲು ದಾವಾ ನಂ.210/2014 ರಲ್ಲಿ 11 ರಿಂದ 14 ನೇ ಪ್ರತಿವಾದಿಯರಾಗಿದ್ದರು ಎಂದರೆ ಸರಿ. ಸದರಿಯವರು ಸದರಿ ದಾವೆಯಲ್ಲಿ ತಮ್ಮ ಪಾಲು ನೀಡುವಂತೆ ಪರಿಹಾರ ಕೇಳಿದ್ದರು ಆದರೆ ನ್ಯಾಯಾಲಯ ಅವರ ವಾದವನ್ನು ತಳ್ಳಿ ಹಾಕಿರುತ್ತದೆ ಎಂದರೆ ಸರಿ. ಸದರಿ ದಾವೆಯಲ್ಲಿ ಈ ದಾವೆಯ ವಾದಿ ಹಾಗೂ 2 ನೇ ಪ್ರತಿವಾದಿಗೂ ಸಹ ಪಾಲು ನೀಡಿರುವುದಿಲ್ಲ ಎಂದೆರ ಸರಿ.

3. 1 ನೇ ಪ್ರತಿವಾದಿ ಹಾಗೂ ಅವರ ಹಿರಿಯರಿಗೂ ಮತ್ತು ಈ ದಾವೆಯ ವಾದಿ, 2 ನೇ ಪ್ರತಿವಾದಿ ಮತ್ತು ಸಿದ್ದಮ್ಮ ರವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ವಾದಿ, 2 ನೇ ಪ್ರತಿವಾದಿ ಹಾಗೂ ಸಿದ್ದಮ್ಮ ರವರ ಹಿರಿಯರ ಆಸ್ತಿಗಳು ಆಗಿರುವುದಿಲ್ಲ ಎಂದರೆ ಸರಿ. ಸದರಿಯವರು ದಾವಾ ಆಸ್ತಿಗಳ ಮಾಲಿಕರು ಅಥವಾ ಕಬ್ಜೆದಾರರು ಆಗಿರುವುದಿಲ್ಲ ಎಂದರೆ ಸರಿ. ವಾದಿ ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷ ನುಡಿದಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲುಃ ವಾದಿ ಪರ : ಶ್ರೀ. ಎಸ್.ಎಂ ವಕೀಲರಿಂದಃ</u>

4. ಈ ದಾವೆಯಲ್ಲಿ ನಾನು ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಯಲ್ಲಪ್ಪ ರವರು 1 ಹಾಗೂ 2 ನೇ ಪ್ರತಿವಾದಿಯರ ಮತ್ತು ಮರಿಲಿಂಗಮ್ಮ ರವರ ಹಿರಿಯ ಆಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಯಲ್ಲಪ್ಪನ ತಂದೆಯ ಹೆಸರು ಜಂಬಣ್ಣ ಎಂದು ಇರುತ್ತದೆ ಎಂದರೆ ಸರಿಯಲ್ಲ. ನಿಮ್ಮ ಪ್ರತಿವಾದ ಪತ್ರದಲ್ಲಿ ಸದರಿ ಯಲ್ಲಪ್ಪನ ತಂದೆ ಜಂಬಣ್ಣ ಆಗಿರುವುದಿಲ್ಲ, ನರಸಪ್ಪ ಎಂಬಾತ ಆಗಿರುತ್ತಾರೆ ಎಂದು ಬರೆಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಕಡೆಚೂರು ಗ್ರಾಮದ ಯಲ್ಲಪ್ಪ ತಂದೆ ನರಸಪ್ಪ ರವರಿಗೆ ಭೀಮವ್ವ, ಸಿದ್ದಮ್ಮ ಹಾಗೂ ನರಸಮ್ಮ ಎಂಬ 03 ಜನ ಹೆಣ್ಣು ಮಕ್ಕಳಿದ್ದಾರೆ ಎಂದು ನಿಮ್ಮ ಪ್ರತಿವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ವಾದಿ ಮಲ್ಲರೆಡ್ಡಿ ಸದರಿ ಯಲ್ಲಪ್ಪ ತಂದೆ ಜಂಬಣ್ಣ ರವರ ಮೊಮ್ಮಗ ಆಗಿರುವುದಿಲ್ಲ ಎಂದು ನಿಮ್ಮ ಪ್ರತಿವಾದ ಪತ್ರ ಹಾಗೂ ಪ್ರಮಾಣ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಸಾಕ್ಷಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಮರಿಲಿಂಗಮ್ಮ ರವರು ಯಲ್ಲಪ್ಪ ತಂದೆ ಜಂಬಣ್ಣ ರವರ ಮಗಳಾಗಿರುವುದಿಲ್ಲ ಎಂದು ನಿಮ್ಮ ಪ್ರತಿವಾದ ಪತ್ರದಲ್ಲಿ ಬರೆಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಭೀಮವ್ವ ರವರು ಸದರಿ ಯಲ್ಲಪ್ಪ ತಂದೆ ಜಂಬಣ್ಣ ರವರ ಮಗಳಾಗಿರುವುದಿಲ್ಲ ಎಂದು ನಿಮ್ಮ ಪ್ರತಿವಾದ ಪತ್ರದಲ್ಲಿ ಬರೆಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಬರೆಸಿದ್ದೇನೆ ಎಂದು ನುಡಿಯುತ್ತಾರೆ. ಅಸಲು ದಾವಾ ನಂ.210/2014 ರಲ್ಲಿಯೂ ವಾದಿ ಮಲ್ಲರೆಡ್ಡಿ ತಾನು ಯಲ್ಲಪ್ಪ ತಂದೆ ಜಂಬಣ್ಣ ರವರ ಮಗ ಆಗಿರುತ್ತೇನೆ ಎಂದು ಬರೆಸಿರುತ್ತಾರೆ ಎಂದರೆ ಸಾಕ್ಷಿ ಆ ರೀತಿ ಸುಳ್ಳು ಬರೆಸಿದ್ದರು ಎಂದು ನುಡಿಯುತ್ತಾರೆ. ಅದೇ ರೀತಿ 2 ನೇ ಪ್ರತಿವಾದಿ ಭೀಮವ್ವ ರವರೂ ಸಹ ಸದರಿ ಯಲ್ಲಪ್ಪ ತಂದೆ ಜಂಬಣ್ಣ ರವರ ಮಗಳಾಗಿರುತ್ತೇನೆ ಎಂದು ಬರೆಸಿದ್ದರು ಎಂದರೆ ಸಾಕ್ಷಿ ಆ ರೀತಿ ಸುಳ್ಳು ಬರೆಸಿದ್ದರು ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಭೀಮವ್ವ ಹಾಗೂ ಮೃತ ಮರಿಲಿಂಗಮ್ಮ ರವರು ಯಲ್ಲಪ್ಪ ತಂದೆ

ಜಂಬಣ್ಣ ರವರ ಮಕ್ಕಳಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರು ಯಲ್ಲಪ್ಪ ತಂದೆ ಜಂಬಣ್ಣ ರವರ ಮಕ್ಕಳಾಗಿರುವುದಿಲ್ಲ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಹಾಗೂ ಮರಿಲಿಂಗಮ್ಮ ರವರು ಯಲ್ಲಪ್ಪ ತಂದೆ ಜಂಬಣ್ಣ ರವರ ಮಕ್ಕಳಾಗಿರುವುದಿಲ್ಲ ಹೊರತು ಯಲ್ಲಪ್ಪ ತಂದೆ ನರಸಪ್ಪ ರವರ ಮಕ್ಕಳಾಗಿರುತ್ತಾರೆ ಎಂದು ನಾನು ಮೊದಲ ಬಾರಿಗೆ ಪ್ರತಿವಾದಿ ನಂ.1(ಬಿ) ರವರ ಪರವಾದ ಪಾಟಿ ಸವಾಲಿನಲ್ಲಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ಯಲ್ಲಪ್ಪ ತಂದೆ ನರಸಪ್ಪ ಎಂಬ ಒಬ್ಬ ವ್ಯಕ್ತಿ ಇದ್ದರು ಎಂಬುದಾಗಿ ಅಸಲು ದಾವಾ ನಂ.210/2014 ರಲ್ಲಿ ವಾದ-ವಿವಾದವೇ ಇರಲಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಯಲ್ಲಪ್ಪ ರವರ ತಂದೆಯ ಹೆಸರನ್ನು ನಮೂದಿಸದ ಕಾರಣ ನಾವು ಅದರ ದುರುಪಯೋಗ ಪಡೆದುಕೊಂಡು ಯಲ್ಲಪ್ಪ ತಂದೆ ಜಂಬಣ್ಣ ಹಾಗೂ ಯಲ್ಲಪ್ಪ ತಂದೆ ನರಸಪ್ಪ ಎಂಬ ಇಬ್ಬರು ವ್ಯಕ್ತಿಗಳು ಇರುತ್ತಾರೆ ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

5. ಯಲ್ಲಪ್ಪ ತಂದೆ ಜಂಬಣ್ಣ ರವರಿಗೆ 03 ಜನ ಮಕ್ಕಳಿದ್ದರು ಎಂದರೆ ಸರಿಯಲ್ಲ. 1 ಹಾಗೂ 2 ನೇ ಪ್ರತಿವಾದಿಯರು ಮತ್ತು ವಾದಿಯ ತಾಯಿ ಮರಿಲಿಂಗಮ್ಮ ರವರು ಸದರಿ ಯಲ್ಲಪ್ಪ ತಂದೆ ಜಂಬಣ್ಣ ರವರ ಮಕ್ಕಳಾಗಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಹಾಗೂ ವಾದಿಯ ತಾಯಿಯೂ ಸಹ ಸದರಿ ಯಲ್ಲಪ್ಪ ತಂದೆ ಜಂಬಣ್ಣ ರವರ ಮಕ್ಕಳಾಗಿರುತ್ತಾರೆ ಎಂಬುದನ್ನು ಒಪ್ಪಿಕೊಂಡರೆ ಅವರಿಗೆ ಪಾಲು ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿ ಹಾಗೂ ಮಾಡಿದ ದಾಖಲೆಗಳಲ್ಲಿ ಯಲ್ಲಪ್ಪ ತಂದೆ ಜಂಬಣ್ಣ ಎಂದು ನಮೂದು ಇದೆ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಯಲ್ಲಪ್ಪ ತಂದೆ ಜಂಬಣ್ಣ ರವರಿಗೆ 03 ಜನ ಮಕ್ಕಳಿದ್ದು ಅವರುಗಳಿಗೆ ದಾವಾ ಆಸ್ತಿಗಳಲ್ಲಿ ಸಮಪಾಲು ಇರುತ್ತದೆ ಎಂದರೆ ಸರಿಯಲ್ಲ.

6. ಸರ್ವೆ ನಂ.361/ಅ ನೇದ್ದರ 09 ಎಕರೆ ಜಮೀನು ಯಲ್ಲಪ್ಪ ತಂದೆ ಜಂಬಣ್ಣ ರವರ ಜಮೀನಾಗಿರುತ್ತದೆ ಎಂದರೆ ಸಾಕ್ಷಿ ಸರಿ, ನನ್ನ ಹಿರಿಯರ ಜಮೀನು ಆಗಿರುತ್ತದೆ ಎಂದು ನುಡಿಯುತ್ತಾರೆ. ಅದೇ ರೀತಿ ಅನುಸೂಚಿ 2 ರಿಂದ 4 ರ ಜಮೀನುಗಳು ಸಹ ಯಲ್ಲಪ್ಪ ತಂದೆ ಜಂಬಣ್ಣ ರವರ ಆಸ್ತಿಗಳಾಗಿರುತ್ತವೆ ಎಂದರೆ ಸರಿ. ವಾದಿಯು ಕಡೆಚೂರು ಗ್ರಾಮದ ಯಲ್ಲಪ್ಪ ತಂದೆ ನರಸಪ್ಪ ರವರ ಮೊಮ್ಮಗ ಆಗಿರುತ್ತಾನೆ ಎಂಬುದನ್ನು ತೋರಿಸಲು ದಾಖಲೆ ಹಾಜರು ಮಾಡಿದ್ದೇನೆ. ಯಾವ ದಾಖಲೆ ಹಾಜರು

ಮಾಡಿದ್ದೀರಿ ಎಂದರೆ ಸಾಕ್ಷಿಯು ನಮ್ಮ ಕುಟುಂಬದ ವಂಶಾವಳಿ ಪ್ರಮಾಣ ಪತ್ರ ಹಾಜರು ಮಾಡಿದ್ದೇನೆ ಎಂದು ನುಡಿಯುತ್ತಾರೆ. ಆದರೆ ವಾದಿಯು ಕಡೆಚೂರು ಗ್ರಾಮದ ಯಲ್ಲಪ್ಪ ತಂದೆ ನರಸಪ್ಪ ರವರ ಮೊಮ್ಮಗ ಆಗಿರುತ್ತಾನೆ ಎಂಬುದನ್ನು ತೋರಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ವಾದಿಯು ಕಡೆಚೂರು ಗ್ರಾಮದ ಯಲ್ಲಪ್ಪ ತಂದೆ ನರಸಪ್ಪ ರವರ ಮೊಮ್ಮಗ ಆಗಿರುತ್ತಾನೆ ಎಂಬ ಯಾವುದಾದರು ದಾಖಲೆ ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿಲ್ಲ ಎಂದು ನುಡಿಯುತ್ತಾರೆ. ವಾದಿಯು ಕಡೆಚೂರು ಗ್ರಾಮದ ಯಲ್ಲಪ್ಪ ತಂದೆ ನರಸಪ್ಪ ರವರ ಮೊಮ್ಮಗ ಆಗಿರುತ್ತಾನೆ ಎಂದು ಯಾವುದೇ ದಾಖಲೆಗಳಲ್ಲಿ ನಮೂದು ಇಲ್ಲ ಎಂದರೆ ಸರಿ.

7. ಅಸಲು ದಾವಾ ನಂ.101/2015ರ ದಾವೆಯನ್ನು ತಿಪ್ಪಣ್ಣ ತಂದೆ ರಾಮಯ್ಯ ಎಂಬಾತ ನನ್ನ ತಾತ ಯಲ್ಲಪ್ಪ ರವರ ವಿರುದ್ಧ ದಾಖಲು ಮಾಡಿರುತ್ತಾರೆ. ಸದರಿ ದಾವೆಯಲ್ಲಿಯೂ ಯಲ್ಲಪ್ಪ ರವರ ತಂದೆಯ ಹೆಸರನ್ನು ಜಂಬಣ್ಣ ಎಂದು ನಮೂದಿಸಲಾಗಿದೆ ಎಂದರೆ ಸರಿ. ಸದರಿ ದಾವೆಯ ದಾಖಲೆಗಳನ್ನು ಈ ದಾವೆಯಲ್ಲಿ ಹಾಜರು ಮಾಡಿದ್ದೇನೆ. ನಮಗೆ ಪಾಲು ಇರುವುದಿಲ್ಲ ಎಂದು ಸದರಿ ದಾವೆಯಲ್ಲಿ ಆದೇಶ ಆಗಿದೆ ಎಂದರೆ ಸರಿಯಲ್ಲ. ಅಸಲು ದಾವಾ ನಂ.210/2014 ರಲ್ಲಿಯೂ ಸಹ ಸರ್ವೆ ನಂ.16ರ 10 ಎಕರೆ 33 ಗುಂಟೆ ಜಮೀನಿನಲ್ಲಿ ನಿಮಗೆ ಪಾಲು ಇರುವುದಿಲ್ಲ ಎಂದು ಆದೇಶವಾಗಿದೆ ಎಂದೆ ಸಾಕ್ಷಿ ಸರಿ, ಆದರೆ ಮೇಲ್ಮನವಿ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಸರ್ವೆ ನಂ.16 ಮಾತ್ರವಲ್ಲದೇ ಬೇರೆ ದಾವಾ ಆಸ್ತಿಗಳಿಗೆ ಸಂಬಂಧಿಸಿದ ತೀರ್ಪು ಸಹ ತಪ್ಪಾಗಿರುತ್ತದೆ ಎಂದು ಮೇಲ್ಮನವಿ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

8. ನನ್ನ ಪರವಾಗಿ ಪ್ರತಿವಾದಿ ನಂ.1 ಬಿ ಈಗಾಗಲೇ ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿಯಲ್ಲ. ನಾವು ದಾವಾ ಜಮೀನುಗಳ ಜಂಟಿ ಮಾಲಿಕರು ಹಾಗೂ ಕಬ್ಜೆದಾರರಾಗಿರುತ್ತೇವೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಾದಿಯೂ ಸಹ ಯಲ್ಲಪ್ಪ ತಂದೆ ಜಂಬಣ್ಣ ರವರ ವಾರಸುದಾರ ಆಗಿರುವುದರಿಂದ ಆತನಿಗೆ ದಾವಾ ಆಸ್ತಿಗಳಲ್ಲಿ ಪಾಲು ಇರುತ್ತದೆ ಎಂದರೆ ಸರಿಯಲ್ಲ. ಅಸಲು ದಾವಾ ನಂ.210/2014 ರಲ್ಲಿ ಈ ವಾದಿ ಮಲ್ಲರೆಡ್ಡಿ ರವರ ಸಾಕ್ಷ್ಯ ವಿಚಾರಣೆ ಆಗಿಲ್ಲ ಎಂದರೆ ಸಾಕ್ಷಿಯು ಆಗಿದೆ ಎಂದು ನುಡಿಯುತ್ತಾರೆ. ಆತನ ಸಾಕ್ಷ್ಯ ವಿಚಾರಣೆ ಆಗದಿರುವ ಕಾರಣ ಆತನ ವಿರುದ್ಧ ತೀರ್ಪು ಆಗಿದೆ ಎಂದರೆ ಸರಿಯಲ್ಲ. ವಾದಿಗೆ ಪಾಲು ಕೊಡಬಾರದೆಂಬ

ಉದ್ದೇಶದಿಂದ ನಾನು ಹಾಗೂ ನನ್ನ ಸಹೋದರ-ಸಹೋದರಿಯರು ಸುಳ್ಳು ಸಾಕ್ಷ ನುಡಿಯುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಯಲ್ಲಪ್ಪ ತಂದೆ ನರಸಪ್ಪ ರವರ ವಂಶಾವಳಿ ಪ್ರಮಾಣ ಪತ್ರವನ್ನು ಹಾಜರು ಮಾಡಿಲ್ಲ.

<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ : ಶ್ರೀ. ಎಸ್.ಎಸ್.ಕೆ ವಕೀಲರಿಂದಃ</u>

9. ನನ್ನ ತಾತನ ಹೆಸರು ಯಲ್ಲಪ್ಪ ತಂದೆ ಜಂಬಣ್ಣ ಎಂದು ಇರುತ್ತದೆ. ದಾವಾ ಆಸ್ತಿಯಲ್ಲಿ 2 ನೇ ಪ್ರತಿವಾದಿಗೂ ಸಹ ಸಮಪಾಲು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಾತನಿಗೆ 03 ಜನ ಮಕ್ಕಳಿದ್ದು ಅವರಿಗೆ ದಾವಾ ಆಸ್ತಿಯಲ್ಲಿ ಪಾಲು ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಾತ ತೀರಿಕೊಂಡ ನಂತರ ಅನುಸೂಚಿ 1 ರಿಂದ 3 ರಲ್ಲಿನ ಆಸ್ತಿಗಳು ನನ್ನ ತಂದೆಯ ಹೆಸರಿಗೆ ವರ್ಗಾವಣೆ ಆಗಿದೆ ಎಂದರೆ ಸರಿ. ಅನುಸೂಚಿ 4 ರ ಆಸ್ತಿ ಈಗಲೂ ಸಹ ನನ್ನ ತಾತನ ಹೆಸರಿನಲ್ಲಿ ಇದೆ ಎಂದರೆ ಸರಿ. ನಮಗೆ ಅನುಕೂಲವಾಗುಂತೆ ನಿಡಿ-14 ಮತ್ತು 14 ಎ ಸುಳ್ಳು ದಾಖಲೆಗಳನ್ನು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡು ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದ ಪತ್ರ ಹಾಗೂ ಪ್ರಮಾಣ ಪತ್ರದಲ್ಲಿ ನಿಡಿ-14 ರಲ್ಲಿನ ವಂಶಾವಳಿಯನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಾತನ ಎಲ್ಲ ಆಸ್ತಿಯನ್ನು ನಾವೆ ತೆಗೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾಖಲೆ ಸೃಷ್ಟಿಸಿ ಹಾಜರು ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ